## ಸಸ್ಪೆನ್ಸ್ ಪ್ರಯಾಣದ 'ಕವಲುದಾರಿ'

'ಕವಲುದಾರಿ' ಹಲವು ಕಾರಣಕ್ಕೆ ನಿರೀಕ್ಷೆ ಮೂಡಿಸಿದ ಸಿನಿಮಾ. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರ ನಿರ್ದೇಶಿಸಿದ ಹೇಮಂತ್ ರಾವ್ ನಿರ್ದೇಶನದ ಎರಡನೇ ಸಿನಿಮಾ ಎನ್ನುವುದು ಮೊದಲ ಕಾರಣ. ಪುನೀತ್ ರಾಜ್‌ಕುಮಾರ್ ಅವರು ತಮ್ಮ 'ಪಿಆರ್‌ಕೆ ಪ್ರೊಡಕ್ಷನ್' ಅಡಿಯಲ್ಲಿ ನಿರ್ಮಾಣ ಮಾಡಿದ ಮೊದಲ ಸಿನಿಮಾವೂ ಹೌದು. ಏಪ್ರಿಲ್‌ನಲ್ಲಿ ಬಿಡುಗಡೆಯಾದ 'ಕವಲುದಾರಿ'ಯನ್ನು ಪ್ರೇಕ್ಷಕರು ಮೆಚ್ಚಿಕೊಂಡರು. ಹೊಸತೆನಿಸುವ ನಿರೂಪಣಾ ತಂತ್ರ, ಎರಡು ಕಾಲಘಟ್ಟಗಳನ್ನು ಹೆಣೆದ ರೀತಿ, ರಿಷಿ, ಅನಂತ್‌ನಾಗ್, ಸಂಪತ್, ಅಚ್ಯುತ್ ಪೈಪೋಟಿಯ ನಟನೆ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಕೌಶಲ, ಚರಣ್‌ರಾಜ್ ಕಾಡುವ ಹಿನ್ನೆಲೆ ಸಂಗೀತ ಹೀಗೆ 'ಕವಲುದಾರಿ'ಯ ಪ್ಲಸ್‌ಪಾಯಿಂಟ್‌ಗಳಿಲ್ಲ ಪ್ರೇಕ್ಷಕರನ್ನು ಆಕರ್ಷಿಸಿತು. ಪ್ರಯೋಗಶೀಲತೆಯ ಕೋಲುಹಿಡಿದು ಸಿದ್ಧಮಾದರಿಯ ಚೌಕಟ್ಟನ್ನು ಜಿಗಿದೂ ಕಮರ್ಷಿಯಲ್ ಆಗಿಯೂ ಗೆಲುವಿನ ದಡ ಮುಟ್ಟಬಹುದು ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ ಸಿನಿಮಾ 'ಕವಲುದಾರಿ'.

ಏಪ್ರಿಲ್ ಮೊದಲವಾರವೇ ಬಿಡುಗಡೆಯಾದ 'ಕವಚ' ಮಲಯಾಳಂನ 'ಒಪ್ಪಂ' ಸಿನಿಮಾದ ರೀಮೇಕ್. ಶಿವರಾಜ್‌ಕುಮಾರ್ ಮೊದಲ ಬಾರಿಗೆ ಅಂಧನಾಗಿ ನಟಿಸಿದ್ದೂ ಈ ಸಿನಿಮಾ ವಿಶೇಷಗಳಲ್ಲೊಂದು. ವಾಣಿಜ್ಯಾತ್ಮಕ ಸೋಲು ಗೆಲುವುಗಳ ಆಚೆಗೂ ಒಂದು ಸದಭಿರುಚಿಯ ಅಚ್ಚುಕಟ್ಟು ಸಿನಿಮಾ ಆಗಿ 'ಕವಚ' ಉಲ್ಲೇಖನಾರ್ಹ. ನಿರ್ಮಾಪಕ ಕೆ. ಮಂಜು ತಮ್ಮ ಪುತ್ರನನ್ನು ಹೀರೊ ಆಗಿಸುವ ಪ್ರಯತ್ನದ ಫಲವಾಗಿ ರೂಪುಗೊಂಡ 'ಪಡ್ಡೆಹುಲಿ' ಚಿತ್ರಮಂದಿರದಲ್ಲಿ ಎಷ್ಟು ಗರ್ಜಿಸಿದರೂ ಪ್ರೇಕ್ಷಕ ಕ್ಯಾರೆ ಅನ್ನಲಿಲ್ಲ.

ಈ ತಿಂಗಳ ಅಂತ್ಯಕ್ಕೇ ಬಂದಿದ್ದು ಧಾರಾವಾಹಿ ನಿರ್ದೇಶಕ ರಮೇಶ್ ಇಂದಿರಾ ನಿರ್ದೇಶನದ 'ಪ್ರೀಮಿಯರ್ ಪದ್ಮಿನಿ'. ಮಹಾನಗರದ ಆಧುನಿಕ ಸಂದರ್ಭದಲ್ಲಿ ಶಿಥಿಲವಾಗುತ್ತಿರುವ ಕೌಟುಂಬಿಕ ವ್ಯವಸ್ಥೆಯ ಕುರಿತು ಇರುವ ಈ ಸಿನಿಮಾ ಮೆಚ್ಚುಗೆ ಗಳಿಸಿದಷ್ಟೇ ವಿವಾದಕ್ಕೂ ಕಾರಣವಾಯ್ತು.



'ಬೆಲ್ ಬಾಟಂ' ಸಿನಿಮಾದಲ್ಲಿ ರಿಷಭ್ ಶೆಟ್ಟಿ, ಹರಿಪ್ರಿಯಾ

## 'ಸೂಜಿದಾರ'ದ ಪ್ರಯೋಗಶೀಲ ಕೌದಿ

ಮೇ ತಿಂಗಳಿನಲ್ಲಿಯೂ ಬಿಡುಗಡೆಯಾದ ಒಟ್ಟು ಸಿನಿಮಾಗಳು 22. ತಮಿಳಿನಲ್ಲಿ ಸೂಪರ್‌ಹಿಟ್ ಆಗಿದ್ದ '96' ಸಿನಿಮಾದ ಕನ್ನಡ ಅವತರಣಿಕೆ '99' ಚಿತ್ರಕ್ಕೆ ಪ್ರೇಕ್ಷಕ ಪಾಸಿಂಗ್ ಮಾರ್ಕ್ಸ್ ಕೂಡ ನೀಡಲಿಲ್ಲ. ಮೂರನೇ ವಾರ ಬಿಡುಗಡೆಯಾದ ಮೌನೇಶ ಬಡಿಗೇರ ನಿರ್ದೇಶನದ 'ಸೂಜಿದಾರ' ವರ್ಷದ ಪ್ರಯೋಗಶೀಲ ಪ್ರಯತ್ನಗಳ ಸಾಲಿಗೆ ಸೇರುವಂಥ ಸಿನಿಮಾ. ನೆನಪು–ಮರೆವುಗಳ ಜಾಲದೊಳಗೆ ಸಿಲುಕಿಕೊಂಡ ನಾಯಕಿ ಮತ್ತು ಭೂತದ ಭಯದಿಂದ ಓಡುತ್ತಲೇ ಇರುವ ನಾಯಕನ ಮುಖಾಮುಖಿ ಈ ಚಿತ್ರದ ಮುಖ್ಯ ಎಳೆ. ಹರಿಪ್ರಿಯಾ ಮತ್ತು ಯಶ್ ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಈ ಚಿತ್ರದ ಕುರಿತು ಸಾಕಷ್ಟು ಪ್ರಶಂಸೆ ವ್ಯಕ್ತವಾದರೂ ಚಿತ್ರಮಂದಿರಗಳಲ್ಲಿ ಉಳಿದುಕೊಂಡಿದ್ದು ಮಾತ್ರ ಕೆಲವೇ ದಿನಗಳು.

ಅಂಬರೀಷ್ ಮಗ ಅಭಿಷೇಕ್ ಅಂಬರೀಷ್ ನಾಯಕನಾಗಿ ನಟಿಸಿದ್ದ 'ಅಮರ್' ಮೇ ಅಂತ್ಯಕ್ಕೆ ತೆರೆಗೆ ಬಂತು. ಲೋಕಸಭಾ ಚುನಾವಣೆಯಲ್ಲಿ ಅಮ್ಮ ಗೆದ್ದ ಉತ್ಸಾಹದಲ್ಲಿದ್ದ ಅಭಿಷೇಕ್‌ಗೆ ಸಿನಿಸಹೃದಯಿ ಅಷ್ಟು ಉತ್ಸಾಹದಿಂದೇನೂ ಸ್ವಾಗತಿಸಲಿಲ್ಲ. ಪರಿಣಾಮವಾಗಿ ಈಗಲೂ ರಾಜ್ಯದಾದ್ಯಂತ ಹಲವು ಚಿತ್ರಮಂದಿರಗಳಲ್ಲಿ 'ಅಮರ್' ಬಣಗುಡುತ್ತಿದ್ದಾನೆ.

ದಶಕಗಳ ಹಿಂದಿನ 'ಅಂತ' ಸಿನಿಮಾವೇ ಹೊಸ ರೂಪದೊಂದಿಗೆ ಮರುಬಿಡುಗಡೆಯಾಗಿದ್ದೇ ಜೂನ್ ತಿಂಗಳ ಮೊದಲ ಶುಕ್ರವಾರದ ಭಾಗ್ಯ. ಈ ವಾರ (ಜೂ. 14) ಆರ್. ಚಂದ್ರು ನಿರ್ದೇಶನದ ಉಪೇಂದ್ರ ರಚಿತಾರಾಮ್ ನಟಿಸಿರುವ 'ಐ ಲವ್ ಯೂ' ಬಿಡುಗಡೆಯಾಗುತ್ತಿದೆ. ನಾಲ್ಕೂವರೆ ನಿಮಿಷದ ಟ್ರೇಲರ್ ಬಿಡುಗಡೆ ಮಾಡುವುದರ ಮೂಲಕ ನಕ್ಕುನಲಿಸಿದ್ದ ಆರ್. ಚಂದ್ರು ಅವರ ಚಿತ್ರಕ್ಕೆ ಜನರು ಗುಲಾಬಿ ನೀಡುತ್ತಾರೋ ದಾಸವಾಳ ಇಡುತ್ತಾರೋ ಎಂಬುದನ್ನು ಕಾದು ನೋಡಬೇಕಷ್ಟೆ.

## ಸೆಕೆಂಡ್ ಹಾಫ್ ಕುರಿತು ಕ್ಯೂರಿಯಸ್!

ಮೇ ತಿಂಗಳಾತ್ಯಂಕ್ಕೆ ಬಿಡುಗಡೆಯಾದ ಸಿನಿಮಾಗಳ ಸಂಖ್ಯೆ 88. ಕಳೆದ ವರ್ಷ ಇದೇ ಸಮಯದಲ್ಲಿ 87 ಸಿನಿಮಾ ಬಿಡುಗಡೆಯಾಗಿದ್ದವು. ಜೂನ್ ಮುಗಿಯುವಷ್ಟರಲ್ಲಿ ಇದು ಶತಕದ ಗಡಿ ದಾಟುವುದರಲ್ಲಿಯೂ ಸಂದೇಹವಿಲ್ಲ. ಆದರೆ ಯಶಸ್ಸಿನ ಪ್ರಮಾಣಕ್ಕೆ ಹೋಲಿಸಿದರೆ ಈ ವರ್ಷದ ಮೊದಲರ್ಧ ಬೆಳೆ ನಿರಾಶಾದಾಯಕವೇನೂ ಆಗಿಲ್ಲ ಎನ್ನುವುದನ್ನು ಗಮನಿಸಬೇಕು. ಅಷ್ಟೇ ಅಲ್ಲ, ವರ್ಷದ ಸೆಕೆಂಡ್ ಹಾಫ್‌ನಲ್ಲಿ ಬರಲಿರುವ ಚಿತ್ರಗಳತ್ತ ಕಣ್ಣು ಹಾಯಿಸಿದರೆ ಭವಿಷ್ಯದಲ್ಲಿ ಹುಲುಸು ಬೆಳೆಯಾಗುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ.

ಲೇಖನದ ಮೊದಲಲ್ಲಿ ಕರ್ನಾಟಕದ ಮಳೆ ಚಕ್ರಕ್ಕೂ ಚಿತ್ರರಂಗಕ್ಕೂ ಇರುವ ವಿರೋಧಾಭಾಸದ ಕುರಿತು ಉಲ್ಲೇಖಿಸಲಾಗಿತ್ತು. ಈಗ ಜೂನ್ ಅಂತ್ಯದ ಹೊತ್ತಿಗೆ ರಾಜ್ಯದಲ್ಲಿ ಒಳ್ಳೆಯ ಮಳೆ ಬೀಳುವ ಸೂಚನೆ ಇದೆ ಎಂದು ಹವಾಮಾನ ತಜ್ಞರು ಹೇಳುತ್ತಿದ್ದಾರೆ. ಚಿತ್ರರಂಗದಲ್ಲಿಯೂ ಸ್ಟಾರ್‌ನಟರ ಸಿನಿಮಾಗಳು ಸಾಲು ಸಾಲಾಗಿ ತೆರೆಗೆ ಬರಲು ಕಾಯುತ್ತಿವೆ. ಕರುನಾಡ ಭೂಮಿಯೂ, ಚಂದನವನದ ಭೂಮಿಕೆಯೂ ಪ್ರತ್ಯಕ್ಷ–ಸಾಂಕೇತಿಕ ಮಳೆಗಾಗಿ ಹಂಬಲಿಸಿದೆ. ದ್ವಿತೀಯಾರ್ಧದಲ್ಲಿ ಮಳೆಚಕ್ರವೂ, ಸಿನಿವರ್ಷವೂ ಸಮೀಕರಣಗೊಂಡು ಸಮೃದ್ಧಗೊಳ್ಳುವ ಲಕ್ಷಣಗಳು ದಟ್ಟವಾಗಿಯೇ ಗೋಚರಿಸುತ್ತಿವೆ. ■